

# ಗಾಂಧಿ-150 ವಿಶೇಷ

**ಹಲವು ದೇಶ–ಕಾಲಗಳ, ಅನೇಕ ನಾಯಕರ ದಾರಿ–ಗುರಿಯಾದ ಗಾಂಧೀ ಮಾರ್ಗದ ಮರು ವ್ಯಾಖ್ಯಾನ, ಅನನ್ಯ ವಿಶ್ಲೇಷಣೆಯ ಸಕಾಲಿಕ, ವಿಶಿಷ್ಟ ಬರವಣಿಗೆ 'ಮಯೂರ'ದ ಓದುಗರಿಗಾಗಿ ಇಲ್ಲಿದೆ...**



## 1

ಗಾಂಧೀಜಿಯ ಹೆಸರು ಆಲ್ ಖೈದಾ ನಾಯಕ ಒಸಾಮ ಬಿನ್ ಲ್ಯಾಡನ್ ಬಾಯಲ್ಲಿ ಕೂಡ ಬಂದಿತ್ತೆಂಬ ಒಂದು ಪುಟ್ಟ ಸುದ್ದಿ ಹಲವರಲ್ಲಿ ಅಚ್ಚರಿ ಹುಟ್ಟಿಸಿರಬಹುದು. ಒಸಾಮ ಬಿನ್ ಲ್ಯಾಡನ್ 1993ರ ಸುಮಾರಿನಲ್ಲಿ ಗಾಂಧಿಯಿಂದ ಸ್ಫೂರ್ತಿ ಪಡೆಯಬೇಕೆಂದು ಹೇಳಿದ್ದ ಮಾತೊಂದನ್ನು ಒಸಾಮ ಕುರಿತು 'ದ ಅಡ್ಯಾಷಿಯಸ್ ಅಸೆಟಿಕ್' ಎಂಬ ಪುಸ್ತಕ ಬರೆದಿರುವ ಮಿಲ್ಲರ್ ಉಲ್ಲೇಖಿಸುತ್ತಾನೆ.

ಆ ಕಾಲದಲ್ಲಿ ಒಸಾಮ ತನ್ನ ಅನುಯಾಯಿಗಳಿಗೆ ಕೊಟ್ಟಿದ್ದ ಕರೆ ಇದು: 'ಗ್ರೇಟ್ ಬ್ರಿಟನ್ನಿನ ಉದಾಹರಣೆ ನೋಡಿ. ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಕರೆಸಿಕೊಂಡಿದ್ದ ಬ್ರಿಟನ್ ತನ್ನ ಅತ್ಯಂತ ದೊಡ್ಡ ವಸಾಹತುವಾಗಿದ್ದ ಇಂಡಿಯಾದಿಂದ ಕಾಲ್ತೆಗೆದಿದ್ದು ಗಾಂಧಿ ಬ್ರಿಟಿಷರ ವಸ್ತುಗಳನ್ನು ಬಹಿಷ್ಕರಿಸಬೇಕೆಂದು ಕರೆ ಕೊಟ್ಟ ಮೇಲೆ. ಹಾಗೇ ಇವತ್ತು ನಾವು ಕೂಡ ಅಮೆರಿಕದ ವಸ್ತುಗಳನ್ನು ತಿರಸ್ಕರಿಸಬೇಕು.' ಆ ಕಾಲದ ಒಸಾಮ ಭಾಷಣದ ಧ್ವನಿಸುರುಳಿಗಳನ್ನು ಕೇಳಿಸಿಕೊಂಡಿರುವ ಮಿಲ್ಲರ್ ಪ್ರಕಾರ, '1996ರವರೆಗೆ ಒಸಾಮ ಬಿನ್ ಲ್ಯಾಡನ್ ಎಲ್ಲೂ ಹಿಂಸೆಯ ಪ್ರಸ್ತಾಪವನ್ನೇ ಮಾಡಿರಲಿಲ್ಲ.'

ಒಸಾಮ ಬಿನ್ ಲ್ಯಾಡನ್ ಅಮೆರಿಕದಿಂದಲೇ ಸೃಷ್ಟಿಯಾಗಿ, ನಂತರ ಅಮೆರಿಕದಿಂದಲೇ ಭಯೋತ್ಪಾದಕನೆಂದು ಕರೆಸಿಕೊಂಡವನು. ನಂತರ ಅಮೆರಿಕದ ಮೇಲೆಯೇ ಬಾಂಬ್ ದಾಳಿ ಮಾಡಿದವನು. ಕೊನೆಗೆ ಅಮೆರಿಕದಿಂದಲೇ ಹತನಾದವನು. ಇಂಥ